ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಮತ್ತು ಆ) ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನಲ್ಲಿ ಹೊಸದಾಗಿ ಪೊಲೀಸ್ ಠಾಣೆಯನ್ನು ತೆರೆಯುವ ಕುರಿತು ರಾಷ್ಟ್ರೀಯ ಪೊಲೀಸ್ ಆಯೋಗದ ಮಾನದಂಡದನ್ವಯ ಹಾಗೂ ಆದ್ಯತೆ ಮತ್ತು ಆಯವ್ಯಯ ಲಭ್ಯತೆಗನುಗುಣವಾಗಿ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.

ಈಗಾಗಲೇ ಚಿಕ್ಕೋಡಿ ಪೊಲೀಸ್ ಉಪ ವಿಭಾಗದಿಂದ ಅಥಣಿಯನ್ನು ಪ್ರತ್ಯೇಕಿಸಿ ಹೊಸದಾಗಿ ಅಥಣಿಗೆ ಹೊಡ ಪೊಲೀಸ್ ಉಪ ವಿಭಾಗವನ್ನು ಪ್ರಾರಂಭಿಸಲು ಸರ್ಕಾರವು ತೀರ್ಮಾನಿಸಿದ್ದು ಶೀಘ್ರದಲ್ಲಿಯೇ ಆದೇಶ ಹೊರಡಿಸಲಾಗುವುದು.

ಪೌರ ಕಾರ್ಮಿಕರು

1228(1306); ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ)

ಅ) ಬೃಹತ್ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು;

ಆ) ಐಪಿಡಿ ಸಾಲಪ್ಪ ವರದಿ ಪ್ರಕಾರ ಎಷ್ಟು ಜನರನ್ನು ಜನಸಂಖ್ಯೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು (ಸಂಪೂರ್ಣ ಮಾಹಿತಿ ಒದಗಿಸುವುದು)

ಇ) ಹೊಸದಾಗಿ ಪೌರಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಪೌರ ಕಾರ್ಮಿಕರನ್ನು ಹೊರಗುತ್ತಿಗೆ ಅಥವಾ ನೇರ ನೇಮಕಾತಿ ಮಾಡಿಕೊಳ್ಳಲು ಸರ್ಕಾರ ಅನುಸರಿಸುತ್ತಿರುವ ಮಾನ ದಂಡಗಳೇನು;

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಅ) ಬೆಳಗಾವಿ ಮಹಾನಗರಪಾಲಿಕೆ ಕಾರ್ಯಾಲಯದಲ್ಲಿ ಪೌರ ಕಾರ್ಮಿಕರ ಖಾಯಂ ಹುದ್ದೆಯಲ್ಲಿ 282 ಹಾಗೂ ಹೊರಗುತ್ತಿಗೆ ಆಧಾರದ ಮೇಲೆ 864 ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಆ) ಐಪಿಡಿ ಸಾಲಪ್ಪ ವರದಿ ಪ್ರಕಾರ 700 ಜನಸಂಖ್ಯೆಗೆ ಒಬ್ಬ ಪೌರಕಾರ್ಮಿಕರನ್ನು ಸ್ಥಳೀಯ ಸಂಖ್ಯೆಗಳಿಗೆ ನೇಮಕ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ. ಸದರಿ ವರದಿಯನ್ವಯ 2011ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿದ್ದು, ಮಹಾನಗರಪಾಲಿಕೆಗಳ ದರ್ಜೆಗೆ ಅನುಗುಣವಾಗಿ ಪೌರಕಾರ್ಮಿಕರ ಹುದ್ದೆಗಳು ಸೃಜಿಸಲಾಗಿದೆ. ಬೆಳಗಾವಿ ಮಹಾನಗರಪಾಲಿಕೆಯು 4ನೇ ದರ್ಜೆ ಮಹಾನಗರ ಪಾಲಿಕೆಯಾಗಿದ್ದು, ಸದರಿ ಪಾಲಿಕೆಗೆ ಒಟ್ಟು 633 ಪೌರಕಾರ್ಮಿಕರ ಹುದ್ದೆಗಳು ಮಂಜೂರಾಗಿರುತ್ತವೆ.

ಇ) ರಾಜ್ಯದಲ್ಲಿ ಬಿಬಿಎಂಪಿಯನ್ನು ಹೊರತುಪಡಿಸಿ ಇತರೆ ಮಹಾನಗರಪಾಲಿಕೆಗಳಿಗೆ ಸರ್ಕಾರದ ಆದೇಶ ಸಂ: ಎಫ್.ಡಿ.461 ಇಎಕ್ಸ್‌ಪಿ–9,2013, ದಿ:21.11.2013ರಲ್ಲಿ 990 ಮತ್ತು ಸಂ:ಎಫ್.ಡಿ.426 ಇಎಕ್ಸ್‌ಪಿ–9, 2014, ದಿನಾಂಕ:16.08.20143ರಲ್ಲಿ 707 'ಡಿ' ದರ್ಜೆ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಅನುಮೋದನೆ ನೀಡಿರುತ್ತದೆ. ಆದರೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಗ್ರೂಪ್ "ಡಿ" ಹುದ್ದೆಗೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿರುತ್ತದೆ. ಆದರೆ, ಪೌರಕಾರ್ಮಿಕರ ಹುದ್ದೆಗೆ ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ದೊರಕುವ ಸಾಧ್ಯತೆ ಕಡಿಮೆ ಇರುವುದರಿಂದ ನಗರಾಭಿವೃದ್ಧಿ ಇಲಾಖೆಯ ಪೌರಕಾರ್ಮಿಕರಿಗೆ ಅನ್ವಯವಾಗುವಂತೆ ಸದರಿ ವಿದ್ಯಾರ್ಹತೆಯನ್ನು ಸಡಿಲಿಸಲು ಸರ್ಕಾರದ ಹಂತದಲ್ಲಿ

ಪರಿಶೀಲಿಸಲಾಗುತ್ತಿದೆ. ನಂತರ ನೇಮಕಾತಿ ಮಾಡಲು ಕ್ರಮವಹಿಸಲಾಗುವುದು.

ಈ) ಕಾರ್ಮಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಕಾಇ 152 ಎಲ್‌ಡಬ್ಲ್ಯೂಎ 2008, ದಿನಾಂಕ:21.02.2011 ರಲ್ಲಿನ ನಿರ್ದೇಶನದಂತೆ ವೇತನ ನಿಗಧಿಪಡಿಸಿ, ಪೌರಕಾರ್ಮಿಕರನ್ನು ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲಾಗುವುದು. ನೇರನೇಮಕಾತಿ ಹುದ್ದೆಗಳನ್ನು ಮಹಾನಗರಪಾಲಿಕೆಗಳ ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಕರ್ನಾಟಕ ನಾಗರೀಕ ಸೇವಾ ನೇಮಕಾತಿ ನಿಯಮಗಳನ್ವಯ ನೇಮಕಾತಿ ಮಾಡಿಕೊಳ್ಳಲಾಗುವುದು.

ಪಶು ಆಸ್ಪತ್ರೆಗಳ ಮಂಜೂರಾತಿ

1229(2041); ಶ್ರೀ ಮಕಬುಲ್ ಎಸ್. ಬಾಗವಾನ್ (ವಿಜಯಪುರ ನಗರ)

ಅ) ವಿಜಯಪುರ ನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಪಶು ಆಸ್ಪತ್ರೆಗಳಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಪಶು ಆಸ್ಪತ್ರೆಗಳನ್ನು ಮಂಜೂರು ಮಾಡಲಾಗಿದೆಯೇ; ಎಷ್ಟು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ;

ಆ) ವಿಜಯಪುರ ನಗರ ಮತಕ್ಷೇತ್ರಕ್ಕೆ 2013 ರಿಂದ 2015ರ ವರೆಗೆ ಆರ್‌ಐಡಿಎಫ್ ಇದರಡಿಯಲ್ಲಿ ಮಂಜೂರಾದ ಆಸ್ಪತ್ರೆಗಳೆಷ್ಟು; ಇದಕ್ಕೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು;

ಇ) ಹಾಗಿದ್ದಲ್ಲಿ, ಮಂಜೂರಾದ ಅನುದಾನದಲ್ಲಿ ಪಶು ಆಸ್ಪತ್ರೆಗಳ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಈ ಕಾಂಗಾರಿಗಳನ್ನು ಯಾವ ಇಲಾಖೆಗೆ ಕೊಡಲಾಗಿದೆ?